

ತಜ್ಞರು ಜಲಚಕ್ರವನ್ನೂ ಗಮನಿಸಿದ್ದರು. ಆಕಾಶ ಮತ್ತು ಭೂಮಿಗೆ ಇರುವ ನಂಟು ಅರ್ಥವಾಗಿತ್ತು. ಆಕಾಶ ದ್ಯಾವ, ಭೂಮಿ ಪೃಥವಿ, ಮಳೆಬಿದ್ದು ಭೂಮಿ ಫಲವತ್ತಾಗಬೇಕು, ಆಹಾರ ಬೆಳೆಯಬೇಕು ಎನ್ನುವ ಸರಳ ಸತ್ಯದಿಂದಲೇ ಸೃಷ್ಟಿಸಿದ ಕಲ್ಪನೆ 'ದ್ಯಾವ–ಪೃಥವಿ'. ಆಕಾಶ ಪುರುಷನಾದರೆ, ಭೂಮಿ ಪ್ರಕೃತಿ ಅಂದರೆ ಸ್ತ್ರೀ ರೂಪ. ಆಕಾಶದಿಂದ ಸುರಿಯುವ ಮಳೆ, ಭೂಮಿ ಗರ್ಭಕಟ್ಟಲು ಬಿತ್ತಿದ ಬೀಜ. ದ್ಯಾವ–ಪೃಥವಿಯ ಪರಿಕಲ್ಪನೆ ಮುಂದಿನ ವೇದಗಳಿಗೂ ವಿಸ್ತರಿಸಿದೆ.

ಅಥರ್ವ ವೇದದಲ್ಲಿ ಭೂಮಿಗೆ ವಿಶೇಷ ಗೌರವ ಸಂದಿದೆ. ಈ ವೇದದ 12ನೇ ಕಾಂಡ, ಒಂದನೇ ಸೂಕ್ತ, 'ಭೂಸೂಕ್ತ'ವೆಂದೇ ಹೆಸರುವಾಸಿ. ಮನುಷ್ಯರನ್ನು ಒಟ್ಟುಗೂಡಿಸಿ ಪೋಷಿಸುತ್ತಿರುವವಳೇ ಭೂಮಿ. ವನಸ್ಪತಿ, ಓಷಧಿ ಅವಳ ಕರುಣೆ. ಸಮುದ್ರ, ನದಿ, ಸರೋವರಗಳಿಗೂ, ಅನ್ನ–ಆಹಾರಗಳಿಗೂ ಅಷ್ಟೇ ಏಕೆ, ಉಸಿರಾಡುವ ಎಲ್ಲ ಜೀವಿಗಳಿಗೂ ಆಧಾರವಾದವಳು ಭೂಮಿ.

'ಹೇ ಭೂಮಿ, ನಮಗೆ ಸಂಪತ್ತನ್ನು ಕರುಣಿಸು, ಪ್ರವಹಿಸುವ ಜಲಧಾರೆ ಎಲ್ಲ ಜೀವಿಗಳಿಗೂ ಹಂಚಿಕೆಯಾಗಲಿ' ಎನ್ನುವ ಭಾವಭಕ್ತಿಯ ಪ್ರಾರ್ಥನೆ ಈ ಸೂಕ್ತಗಳಲ್ಲಿ ನಿಚ್ಚಳವಾಗಿ ಕಾಣುತ್ತದೆ. 'ಕಲ್ಲು ಬಂಡೆ, ದೂಳು, ಖನಿಜ ಇವುಗಳನ್ನೆಲ್ಲ ಚೆನ್ನಾಗಿ ಧರಿಸಿ ತಾನೂ ಧನ್ಯಳಾಗಿರುವ ಬಂಗಾರದ ಒಡಲಿನಿಂದ ಕೂಡಿರುವ ಭೂದೇವಿಗೆ ನಮಸ್ಕಾರ' ಎನ್ನುತ್ತದೆ ಒಂದು ಪ್ರಾರ್ಥನೆ. ಇಲ್ಲಿನ ಇನ್ನೊಂದು ಪ್ರಾರ್ಥನೆ ವೇದಕಾಲದಲ್ಲಿದ್ದ ಬಹುತ್ವದ ಬಗ್ಗೆ ಉದಾರನೀತಿಯನ್ನು ಪ್ರಕಟಿಸುತ್ತದೆ: 'ವಿವಿಧ ಭಾಷೆಗಳನ್ನಾಡುವ, ವಿವಿಧ ಧರ್ಮಗಳನ್ನು ಆಚರಿಸುವ, ನಾನಾ ವಿಧದ ಜನರಿಗೆಲ್ಲ ಅವರ ಅನುಕೂಲಕ್ಕೆ ತಕ್ಕಂತೆ ನೆಲೆ ನೀಡಿರುವ ಭೂಮಿಯು ನಿರಂತರ ಹಾಲು ಕರೆಯುವ ಕಾಮಧೇನುವಿನಂತೆ ಸಾವಿರ ಬಗೆಯ ಸಂಪತ್ತನ್ನು ನೀಡಲಿ.'

ಎಲ್ಲವನ್ನೂ ದಯಪಾಲಿಸಿರುವ ಭೂಮಿಗೆ ಕೃತಜ್ಞತೆಗಳನ್ನು ಹೇಗೆ ಸಲ್ಲಿಸಬೇಕು? ಅದನ್ನೂ 'ಭೂಸೂಕ್ತ' ಸೊಗಸಾಗಿ ಹೇಳುತ್ತದೆ: ಓ ಭೂಮಿಯೇ, ಯಾವಾಗ ನಿನ್ನಲ್ಲಿ ಹಳ್ಳ ತೋಡುವೆವೋ, ಅದು ಕೂಡಲೇ ಮುಚ್ಚಿಕೊಳ್ಳಲಿ, ನಿನ್ನ ಮರ್ಮಸ್ಥಾನವನ್ನು, ಹೃದಯವನ್ನು ನಾವು ಹಾನಿಮಾಡದಂತಾಗಲಿ.' ಎಂಥ ದಯೆ, ಪಶ್ಚಾತ್ತಾಪ, ಭಯ ವೇದಕಾಲೀನ ಜನರದ್ದು!

'ನಿದ್ದೆ ಮಾಡುವಾಗ ನಾವು ಎಡಕ್ಕೂ ಬಲಕ್ಕೂ ಹೊರಳುತ್ತೇವೆ. ಅಂಗಾತನಾಗಿ ನಿನ್ನ ಮೇಲೆ ಮಲಗುತ್ತೇವೆ, ಹೀಗೆ ನಿದ್ರಿಸುವಾಗ ಎಲ್ಲರಿಗೂ ನೀನೇ ಆಧಾರ. ಓ ಭೂಮಿಯೇ ನಮಗೆ ಸೋಲನ್ನುಂಟುಮಾಡಬೇಡ' ಎಂಬುದು ಮತ್ತೊಂದು ಪ್ರಾರ್ಥನೆ. ಇನ್ನು ತಾಯಿಗೆ ಹಾನಿಮಾಡುವುದುಂಟೆ? ನಮ್ಮ ನಡೆನುಡಿಗಳು ಯಾವವೂ ಪೋಷಿಸುವ ಭೂಮಿಯನ್ನು ನೋಯಿಸಬಾರದು: ಏಳುವಾಗ, ಕುಳಿತುಕೊಳ್ಳುವಾಗ, ನಿಂತಾಗ, ನಡೆಯುವಾಗ ಹಾಗೂ ಎಡ ಅಥವಾ ಬಲ ಕಾಲುಗಳನ್ನು ಊರುವಾಗ, ಭೂಮಿಗೆ ನೋವಾಗದಿರಲಿ ಎಂಬ ಸೂಕ್ಷ್ಮ ಸಂವೇದನೆ ಇನ್ನೊಂದು ಪ್ರಾರ್ಥನೆಯಲ್ಲಿದೆ.

ಪ್ರಾಚೀನರು ಭೂಮಿಗೆ ತೋರಿದ ಕೃತಜ್ಞತೆ ಇದು. ಈಗ ನಾವೇನು ಮಾಡುತ್ತಿದ್ದೇವೆ? ನಾವೂ ಕ್ಷಮೆ ಕೇಳುತ್ತಿದ್ದೇವೆಯೆ?

'ಹೇ ಭೂಮಿಯೇ, ನಿನ್ನ ಹಸಿರು ಸೀರೆಯನ್ನೆಲ್ಲ
ಕಿತ್ತು ಒಗೆದು ನಿನ್ನನ್ನು ವಿರೂಪಗೊಳಿಸುತ್ತಿದ್ದೇವೆ.
ಹೇ ಭೂಮಾತೆ, ನಿನ್ನ ವಕ್ಷಸ್ಥಲಗಳನ್ನು ಬಗೆದು
ನಿನ್ನ ಅಮೂಲ್ಯ ಸಂಪತ್ತನ್ನೆಲ್ಲ ಎತ್ತಿ ನಿನ್ನ
ಮೈಯನ್ನೇ ರಾಡಿಮಾಡಿದ್ದೇವೆ.
ಹೇ ಪೃಥ್ವಿಯೇ, ನಿನ್ನ ನದಿ, ತೊರೆಗಳನ್ನೆಲ್ಲ
ಮಾಲಿನ್ಯಮಾಡಿ ನೀನಂತಿರಲಿ, ನಾವೂ
ಕುಡಿಯದಂತೆ ಕಲುಷಿತಗೊಳಿಸಿದ್ದೇವೆ.
ಹೇ ವಸುಧೆ, ನಿನ್ನ ಮುಖವನ್ನೆಲ್ಲ ಪ್ಲಾಸ್ಟಿಕ್
ತುಂಡುಗಳಲ್ಲಿ ಮುಚ್ಚಿದ್ದೇವೆ, ನೀನು
ಉಸಿರಾಡುವುದಾದರೂ ಎಂತು?
ಹೇ ಧಾತ್ರಿ, ನೀನು ಕಳುಹಿಸಿದ ಮೆಲು
ಗಾಳಿಯನ್ನೆಲ್ಲ ಸೇವನೆ ಮಾಡದಂತೆ ಮಾಡಿ,
ಅಟ್ಟಹಾಸ ಬೀರಿದ್ದೇವೆ.
ಹೇ ಧರಣಿ, ನಿನ್ನ ಕೈಗಳನ್ನು ಕತ್ತರಿಸಿ
ದಶದಿಕ್ಕುಗಳಲ್ಲಿ ಚೆಲ್ಲಿ ಕೇಕೆ ಹಾಕಿದ್ದೇವೆ.
ಹೇ ಧರಿತ್ರಿ, ನೀನು ಕೊಟ್ಟ ಸಂಪನ್ಮೂಲವನ್ನೇ
ಬಳಸಿ, ನಿನ್ನನ್ನೇ ಸುಡುತ್ತಿದ್ದೇವೆ.'
ಹೇ ಕ್ಷಮಯಾಧರಿತ್ರಿ,
ನಾವು ಮಾಡಿರುವ ಪಾಪಕೃತ್ಯಗಳನ್ನೆಲ್ಲ ನೀನು
ಕ್ಷಮಿಸುವುದಿಲ್ಲವೆಂದು ಗೊತ್ತು. ಅದಕ್ಕಾಗಿಯೇ
ನಿನಗೆ ಯಾವ ಪ್ರಾರ್ಥನೆಯನ್ನೂ ಸಲ್ಲಿಸಲಾರೆವು.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in